ನೀನು ಬಿಟ್ಟುಹೋದ್ರೆ ನಂಗೆ ಕಷ್ಟ ಆಗುತ್ತೆ. ನಿಂಗೆ ಗೊತ್ತು, ನಂಗೆ ಕಾಲ್ನೋವು ಅಂತ, ಸರಿಯಾಗಿ ನಡೆಯೋಕಾಗಲ್ಲ. ಅದಕ್ಕೆ ನನ್ನ ಹೆದರಿಸ್ತೀಯಾ?"

ಅವಳು ಮೌನ, ನಿರುತ್ತರ. ಚಂಪಾ ಈಗ ಮಾತಾಡಿದಳು, "ಇವಳು ನಿಮ್ಮನೇಲಿ ಕೆಲಸ ಮಾಡೋಲ್ಲ ಅಂತಾಳೆ".

"ಅವಳ ಮಾತಿಗೆ ನೀನು ಕುಣಿತಾಯಿದಿಯಾ? ಇಷ್ಟು ಚೆನ್ನಾಗಿ ಯಾರ ಮನೇಲಿ ನೋಡ್ಕೊತಾರೆ ಅವಳನ್ನ? ಕೊಟ್ಟಷ್ಟು ಬೇಕು ಬೇಕು ಅಂತಾರೆ! ನೀನು ಮಗಳು ಚೆನ್ನಾಗಿರಬೇಕು ಅಂತ ತಾನೇ ಬಯಸ್ತೀಯಾ, ಒಳ್ಳೇ ಕಡೆ ಮದುವೆ ಮಾಡಬೇಕು ಅಂತೀಯಾ. ನಮ್ಮ ಅಪಾರ್ಟ್‌ಮೆಂಟಲ್ಲಿ ಒಬ್ಬ ಗಾರ್ಡ್ ಅವನೆ, ಅವನ ಜೊತೆ ಮಾತಾಡಿದ್ದೆ. ಅವರ ಅಣ್ಣನ ಮಗ ಕೋಲ್ಕತ್ತಕ್ಕೆ ಬರ್ತಾಯಿದಾನೆ. ಜೋಧಪುರ್ ಪಾರ್ಕ್ ಹತ್ರ ಒಂದು ಅಪಾರ್ಟ್‌ಮೆಂಟಲ್ಲಿ ಗಾರ್ಡ ಆಗಿ ಕೆಲಸಕ್ಕೆ ಸೇರ್ತಾಯಿದ್ದ. ಎಷ್ಟು ಚೆನ್ನಾಗಿತ್ತು ನೋಡು? ಜುಂಪಾ ಹೆಂಗಿದ್ಲೋ ಹಂಗೆ ಇರಬೋದಾಗಿತ್ತು. ನಮ್ಮ ಮನೇಲಿ ಸರ್ವೆಂಟ್ ರೂಮ್ ಬಿಟ್ಟುಕೊಡ್ತಾಯಿದ್ದೆ. ಅವರು ಅಲ್ಲೇ ಎಷ್ಟು ಚೆನ್ನಾಗಿ ಇರಬೋದಾಗಿತ್ತು. ನೀನೀಗ ಏರಿಯಾದಲ್ಲಿ ಹೆಸರು ಕೆಡಿಸ್ಕೊಂಡಿದಿಯಾ? ನಾನು ಮುಖ ತೋರಿಸೋದ್ಹೇಗೆ?" ಆ ಯಜಮಾನಿಯ ಧ್ವನಿಯಲ್ಲಿ ನಿಜಕ್ಕೂ ಹತಾಶೆ ತುಂಬಿಕೊಂಡಿತ್ತು. ಅಷ್ಟರಲ್ಲಿ ಫೋನ್ ರಿಂಗಾಯಿತು. ಆ ಯಜಮಾನಿ ಪಿಸಪಿಸ ಅಂತ ಏನೋ ಮಾತಾಡ್ತಿದ್ದಳು. ಬೆಂಚ್ ಮೇಲೆ ಕೂತ್ಕೊಂಡು ಜುಂಪಾ ನೆಲ ನೋಡ್ತಾಯಿದ್ಲು. ಚಂಪಾ ಮುಖ ಮಾತ್ರ ಅದೇ ತರ ನಿರ್ಭಾವುಕವಾಗಿತ್ತು.

ನನಗೆ ಇದು ಅಚ್ಚರಿಯೆನಿಸತೊಡಗಿತು. ಆ ಯಜಮಾನಿಯ ಮಗಳ ವಯಸ್ಸಿನ ಈ ಹುಡುಗಿ ಏನೋ ಮಾಡಬಾರದ್ದು ಮಾಡಿದಾಳೆ ಅನ್ನಿಸ್ತು. ಆದರೂ ಅದನ್ನ ಮುಚ್ಚಿಡದೆ ಎಲ್ಲರ ಮುಂದೆ ಮಾತಾಡ್ತಾಯಿದ್ದದ್ದು ನೋಡಿ ನನಗೆ ಆಶ್ಚರ್ಯವಾಯ್ತು. ಹುಡುಗೀರ ಮುಂದೆ ಹುಡುಗೀರ್ಗೆ ಏನೂ ಸಂಕೋಚ ಇಲ್ಲ ಅಂತ ಎಲ್ರೂ ಅಂದ್ಕೋತಾರೆ, ಸರಿ. ಆದರೆ, ಈ ಭಾವನೆ ಬದಲಾಗಬೇಕು ಅಂತ ನಾನು ಯೋಚನೆ ಮಾಡೋಕೆ ಹೋಗಲಿಲ್ಲ, ಪಾರ್ಲರಲ್ಲಿ ಸುಮಾರು ಏಳೆಂಟು ಜನ ಹುಡುಗಿಯರಿದ್ರು. ಪಾರ್ಲರ್‌ನ ಯಜಮಾನಿ ಇದಾಳೆ, ಜುಂಪಾ, ಅವರಮ್ಮ ಇದಾರೆ. ಮಧ್ಯಾನ್ಹ ಈ ಹೊತ್ತಲ್ಲಿ ಜನ ಪಾರ್ಲರ್‌ಗೆ ಬರೋದಿಲ್ಲ. ಅದರಿಂದಲೇ ಇರಬೇಕು ಪಾರ್ಲರ್‌ನ ಯಜಮಾನಿ ಈ ಸಮಯ ನಿಗದಿ ಮಾಡಿರಬೇಕು. ಬಹುಶಃ ನಾನೇ ಬರಬಾರದ ಸಮಯದಲ್ಲಿ ಬಂದಿದಿನಿ. ಇನ್ನೊಬ್ಬ ಹುಡುಗಿಯೂ ಬಂದಿದಾಳೆ. ಅವಳು ಮೆಹಂದಿ ಹಾಕಿಸ್ಕೊಂಡು ಕೂದಲನ್ನು ಗೋಪುರದ ಹಾಗೆ ಕಟ್ಟಿಸಿಕೊಂಡಿದಾಳೆ. ಒಂದೇ ಸಮ ಮೊಬೈಲಲ್ಲಿ ಕುಟುಕುಟು ಅಂತ ಏನೂ ಮಾಡ್ತಾ ಕೂತವಳೆ. ಅವಳೇನೋ ಕೇಳಿಸ್ಕೊತಾಯಿಲ್ಲ ಅಂತ ಅನಿಸುತ್ತೆ ಅಥವಾ ಏನೂ ಕೇಳಿಸ್ಕೊಳ್ಳದವಳಂತೆಯೂ ಕೂತಿರಬಹುದು. ನಾನು ಮಾತ್ರ ಅಸಭ್ಯಳಂತೆ ಎಲ್ಲವನ್ನು ಕೇಳಿಸ್ಕೊತಾಯಿದಿನಿ, ಆಗಾಗ್ಗೆ ಹಿಂದಿರುಗಿಯೂ ನೋಡ್ತಾಯಿದಿನಿ, ಆದರೂ ಯಾರೂ ಅದರ ಬಗ್ಗೆ ತಲೆ ಕೆಡಿಸ್ಕೊತಾಯಿಲ್ಲ.

ಫೋನ್ ಇಟ್ಟು ಯಜಮಾನಿ ವಿಷಾದದಿಂದ ಕುರ್ಚಿಗೆ ಒರಗಿ ಕೂತಳು. ಪಾರ್ಲರನ ಹುಡುಗಿಯಬ್ಬಳು ಹೇಳಿದಳು, "ನಾವೆಲ್ಲ ಅವಳನ್ನ ಆ ಹುಡುಗನ ಜೊತೆ ನೋಡಿದಿವಿ. ಅವಳೇನಾದರೂ ಹೇಳ್ಲಿ!" ಈ ಮಾತಿಗೆ ಯಜಮಾನಿ ಮತ್ತೆ ಜೋರಾದಳು.

"ನೀವೇ ಹೇಳ್ರೇ! ಏನೇ ಜುಂಪಾ, ಎಲ್ರೂ ಸುಳ್ಳು ಹೇಳ್ತಾಯಿದಾರಾ? ನೀನೊಬ್ಬಳೇ ನಿಜ ಹೇಳೋಳು?"

ಮತ್ತೆ ಪ್ರತಿರೋಧದ ಧ್ವನಿಯಲ್ಲಿ ಜುಂಪಾ ಹೇಳಿದಳು, ''ಸುಳ್ಳು ಹೇಳ್ತಾಯಿದಾರೆ ಅಂತ ನಾನು ಹೇಳಲಿಲ್ಲ!"

"ಅಂದ್ರೆ! ನೀನು ಹೇಳ್ತಿದಿಯಾ, ಆ ದಿನ ರಾತ್ರಿಪೂರ್ತಿ ಆ ಹುಡುಗನ ಜೊತೆ ಇದ್ಯಾ? ಆ ಹುಡುಗನ